WRITS ON SERVICE MATTERS OF CO-OPERATION DEPARTMENT

655. SRI M. B. RAMASWAMY (Anekal) —

Will the Minister for Co-operarion be pleased to state ;—

(*a*) the number of writ petitions in respect of service matters of Co-operative Department filed so far ;

(*b*) of them the number that are disposed off and the result ;

(*c*) the number of them pending ?

SRI A. SHANKARA ALVA (Minister for Co-operation) —

(*a*) 80 since 1969.

(*b*) 22.

3 dismissed.

19 allowed.

(*c*) 58.

ಶ್ರೀ ಎಂ. ಬಿ. ರಾಮಸ್ವಾಮಿ :—ಇತ್ಯರ್ಥವಾಗದಿರುವ ಅರ್ಜಿಗಳ ಸಂಖ್ಯೆ ೫೮ ಎಂದು ಹೇಳಿದ್ದೀರಿ ಮತ್ತು ೧೯೬೯ನೇ ಇಸವಿಯಿಂದ ದಾಖಲಾಗಿರುವ ಅರ್ಜಿಗಳ ಸಂಖ್ಯೆ ೮೦ ಎಂದು ಹೇಳಿದ್ದೀರಿ. ಇವುಗಳ ಜಾಗ್ರತೆ ಇತ್ಯರ್ಥವಾಗದಿರುವುದಕ್ಕೆ ಸರಿಯಾದ ಮಾಹಿತಿ ಇಲಾಖೆಯಲ್ಲಿ ಇಲ್ಲದೆ ಇರುವುದು ಕಾರಣವೋ ಅಥವಾ ಕೋರ್ಟಿನಲ್ಲಿ ಪೆಂಡಿಂಗ್ ಇವೆಯೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ :—ರಿಟ್ ಅರ್ಜಿಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ.

ಶ್ರೀ ಎಂ ಬಿ. ರಾಮಸ್ವಾಮಿ : ಹೈಕೋರ್ಟಿನವರು ಕೇಳಿದ ಮಾಹಿತಿಯನ್ನು ಇಲಾಖೆಯವರು ಕೂಡಲೆ ಒದಗಿಸದೆ, ಯಾರೋ ಒಬ್ಬರಿಗೆ ಖಂಡಿತವಾಗಿ ಅನ್ಯಾಯ ಮಾಡಬೇಕು ಎಂಬ ಉದ್ದೇಶದಿಂದ ನಿಧಾನ ಮಾಡಿ, ನಂತರ ಅದು ಕೋರ್ಟಿನಲ್ಲಿ ಪಜಾ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ —ಇಲ್ಲಿ ೩ ರಿಟ್ ಅರ್ಜಿಗಳು ಡಿಸ್‌ಮಿಸ್ ಆಗಿದೆ. ೧೯ ರಿಟ್ ಅರ್ಜಿಗಳನ್ನು ಅಂಗೀಕರಿಸಲಾಗಿದೆ. ಒಂದು ಕೇಸ್ ಬಗ್ಗೆ ಸೀನಿಯಾರಿಟಿ ಲಿಸ್ಟ್‌ನ್ನು ಎರಡು ತಿಂಗಳಲ್ಲಿ ತಯಾರು ಮಾಡಿ ಕೊಡಬೇಕೆಂದು ಹೈಕೋರ್ಟಿನವರು ಸರ್ಕಾರದವರನ್ನು ಕೇಳಿದ್ದಾರೆ. ಎರಡು ತಿಂಗಳಲ್ಲಿ ಮಾಡುವುದಕ್ಕೆ ಆಗುವುದಿಲ್ಲ, ಮೂರು ತಿಂಗಳ ಸಮಯ ಬೇಕು ಎಂದು ಲಾ-ಇಲಾಖೆಯವರು ಹೈಕೋರ್ಟಿಗೆ ಅರ್ಜಿ ಹಾಕಿದ್ದಾರೆ. ಈಗ ಸೀನಿಯಾರಿಟಿ ಲಿಸ್ಟ್ ತಯಾರಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ :—ಕೋರ್ಟಿನವರು ಕೇಳತಕ್ಕಂಥ ಮಾಹಿತಿಗಳನ್ನು ಇಲಾಖೆಯವರು ಸಕಾಲದಲ್ಲಿ ಒದಗಿಸದೆ, ಎಷ್ಟೋ ಜನರಿಗೆ ಪ್ರಮೋಷನ್ ದೊರೆಯದೆ ಇರತಕ್ಕಂಥ ಪ್ರಮೇಯಗಳಿವೆ. ಆದ್ದರಿಂದ ಅವರು ಕೇಳತಕ್ಕಂಥ ಮಾಹಿತಿಗಳನ್ನು ಜಾಗ್ರತೆ ಒದಗಿಸಿಕೊಟ್ಟು ಸೀನಿಯಾರಿಟಿ ಇರುವವರಿಗೆ ಜಾಗ್ರತೆ ಪ್ರಮೋಷನ್ ದೊರೆಯುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ :—ಹೈಕೋರ್ಟ್ ಆದೇಶದ ಪ್ರಕಾರ ಸೀನಿಯಾರಿಟಿ ಲಿಸ್ಟ್ ತಯಾರು ಮಾಡುತ್ತಿದ್ದೇವೆ.